ದಿನಾಂಕಃ **06.12.2025**
**ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.**
**ಪಿ.ಡಬ್ಲ್ಯೂ . 1**

**ಮುಖ್ಯ ವಿಚಾರಣೆಃ ಅರ್ಜಿದಾರ ಪರ ಶ್ರೀಮತಿ.ಎ.ಆರ್., ವಕೀಲರಿಂದಃ**

ನಾನು ಈ ಪ್ರಕರಣದಲ್ಲಿ 1ನೇ ಅರ್ಜಿದಾರನಿದ್ದೇನೆ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದು, ಅದರಲ್ಲಿ ಬರೆದ ವಿಷಯಗಳು ನಿಜ ಇರುತ್ತದೆ.

ನನ್ನ ತಾಯಿ ಚಿಕ್ಕಮ್ಮ ಇವರು ನನಗೆ ದಿಃ19.03.1999 ರಂದು ಮಾಡಿಕೊಟ್ಟ ಅಸಲು ಮರಣಶಾಸನ ನೋಡುತ್ತಿದ್ದು ಅದನ್ನು ನಿಪಿ.1 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ಎಂ.ಹೆಚ್. ಅಣ್ಣಯ್ಯನವರ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

ದಿನಾಂಕಃ **09.01.2026.**
**ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.**
**ಪಿ.ಡಬ್ಲ್ಯೂ . 1**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರ ಪರ ಶ್ರೀಮತಿ.ಎ.ಆರ್., ವಕೀಲರಿಂದಃ**

ದಿಃ13.04.1999 ರಂದು ನನ್ನ ತಾಯಿ ಚಿಕ್ಕಮ್ಮ ಇವರು ಮರಣ ಹೊಂದಿದ್ದರ ಬಗ್ಗೆ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ನಿಪಿ.2 ಎಂದು, ನನ್ನ ತಂದೆ ಗಂಗರಂಗಯ್ಯ ಇವರ ಮನೆತನಕ್ಕೆ ಸಂಬಂಧಪಟ್ಟಂತಹ ವಂಶವೃಕ್ಷ ನೋಟರಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ.3 ಎಂದು, ನನ್ನ ತಾಯಿ ಹೆಸರಿನಲ್ಲಿ ಸ.ನಂ.22, 7 ಎಕರೆ 1 ಗುಂಟೆ ಜಮೀನು ಇದ್ದ ಬಗ್ಗೆ ಹಾಗೂ ಸ.ನಂ.8/3, 34 ಗುಂಟೆ 2025-26 ರ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ನಿಪಿ.4 ಮತ್ತು 5 ಎಂದು, ನಮ್ಮನ್ನು ಹೊರತು ಪಡಿಸಿ ಬೇರೆ ಯಾರಾದರು ತಕರಾರು ಇದ್ದಲ್ಲಿ ಮಾನ್ಯ ನ್ಯಾಯಾಲಯಕ್ಕೆ ಹಾಜರಾಗಿ ತಕರಾರು ಸಲ್ಲಿಸಬಹುದು ಎಂಬ ಬಗ್ಗೆ ದಿಃ15.07.2025 ರಂದು ಸುವರ್ಣ ಕರ್ನಾಟಕ ಕನ್ನಡ ದಿನಪತ್ರಿಕೆಯಲ್ಲಿ ಪ್ರಕಟಣೆ ಮಾಡಿದ ಬಗ್ಗೆ ದಿನಪತ್ರಿಕೆಯನ್ನು ಹಾಜರುಪಡಿಸಿದ್ದು ನಿಪಿ.6 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಏನು ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ಎಂ.ಹೆಚ್. ಅಣ್ಣಯ್ಯನವರ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**